PRIVATE MEMBERS BILLS

Karnataka Agricultural Workers Bill, 1975 Introduction

SRI KONANDUR LINGAPPA (Thirthahalli).—Madam, I big leave of the House to introduce the Karnataka Agricultural Workers Bill, 1975.

SRI S. M. YAHYA (Minister for Labour and Excise).— Madam, Government will bring a sim lar Bill. However, I have nothing to say at the moment.

MADAM SPEAKER.— the question is./-

"That leave be granted to introduce the Karnataka Agricultural Workers Bill, 1975."

The motion was adopted

SRI KONANDUR LINGAPPA.—Madam, I beg to introduce the Bill.

MADAM SPEAKER.— The Bill is introduced. **

PRIVATE MEMBERS' RESOLUTIONS

Re – Constitution of Export Committee to study and fix up reas nable rates for the supply of water for drinking and domestic use in Bangalore City.

†ಶ್ರೀ ಕೆ.ಆರ್ ಶ್ರೀನಿವಾಸಲು ನಾಯ್ಡು (ಶಾಂತಿನಗರ).–ಸನ್ಮಾನ್ಯ ಸಭಾಧ್ಯಕ್ಷಣಿಯವರೆ, ನಿನ್ನೆಯ ದಿವಸ ಬಾಯಾರಿದ ಬೆಂಗಳೂರಿಗೆ ಕಾವೇರಿ ಬಂದಳು ಎನ್ನುವ ಬಗ್ಗೆ ಮಾತನಾಡುತ್ತಿದ್ದೆ. ಈ ದಿವಸವೂ ಆದನ್ನೇ ಮುಂದುವರಿಸುತ್ತೇನೆ. ನಿನ್ನೆಯ ದಿವಸ ಮಾನ್ಯ ಪಿತ್ರರಾದ ಶ್ರೀಮಾನ್ ಶಾಮಣ ನವರು ಹಾಗೂ ಕೃಷ್ಣನ್‌ರವರು ತಮಗೆ ಗೊತ್ತಿರುವ ಹಾಗೆ ಈ ಕಾವೇರಿ ನೀರಿನ ಬಗ್ಗೆ ಕೆಲವು ಕಟು ಟೀಕೆ ಗಳನ್ನೂ ಕೆಲವು ಉತ್ತಮವಾದ ಸಲಹೆಗಳನ್ನೂ ಕೊಟ್ಟರು ಆದರೆ ಅದಕ್ಕೆ ಮುಖ್ಯವಾಗಿ ಯಾರು ಜವಾ ಬ್ದಾರರು ಎಂಬುದನ್ನೂ ಕೂಡ ಅವರು ಹೇಳಿದರು. ತಮಗೇ ಗೊತ್ತಿರುವಹಾಗೆ ಈ ಯೋಜನೆಯನ್ನು ತರಬೇಕೆಂದು ಬಹಳ ದಿವಸಗಳಿಂದ ಆಸೆ ಇತ್ತು. ಕಾರಣ, ಬೆಂಗಳೂರು ಪಟ್ಟಣ ಅಮಿತವಾಗಿ ಬೆಳೆ ಯುತ್ತಾ ಬಂತು, ಇನ್ನು ಮುಂದೆಯೂ ಕೂಡ ಈ ಪಟ್ಟಣ ಬೆಳೆಯುತ್ತದೆ. ಇದು ಮೂರು ಹಂತದಲ್ಲಿ ಬೆಳೆದುಕೊಂಡು ಬರುತ್ತಿದೆ. ಒಂದು ಕಾಲದಲ್ಲಿ ಈ ಪಟ್ಟಣ ಸಣ್ಣದಾಗಿದ್ದಾಗ ಹೆಸರುಘಟ್ಟದಿಂದ ನೀರು ತರುತ್ತಿದ್ದೆವು, ನಂತರ ತಿಪ್ಪಗೊಂಡನಹಳ್ಳಿಯಿಂದ ನೀರನ್ನು ತಂದವು, ಆನಂತರ ಕಾವೇರಿ ನೀರನ್ನು ತಂದೆವು. ಕಾವೇರಿ ನೀರನ್ನು ತರುವಲ್ಲಿ ಜನರಿಗೆ ಆಸ್ವಾಸನೆ ಕೊಟ್ಟ ಪ್ರಕಾರ ಅದನ್ನು ಕಾರ್ಯಗತ ಮಾಡುವ ಕಾಲ ಬಂತು ಕಾವೇರಿ ನೀರನ್ನು ಬೆಂಗಳೂರಿಗೆ ತರಬೇಕಾದರೆ ಬಹಳ ದೂರದಿಂದ ತರಬೇಕು ಎಂಬುದು ಎಲ್ಲರಿಗೂ ಗೊತ್ತು. ಇದಕ್ಕೆ ಹಣವನ್ನು ಒದಗಿಸುವುದು ಕಷ್ಟಕ್ಕೆ ಬಂದಾಗ ನಾವು ಬೇಕಾದಷ್ಟು ಏಜೆನ್ಸಿಗಳನ್ನು ಅಪ್ರೋಚ್ ಮಾಡಿದೆವು. ನಾನು ನಿನ್ನೆ ಹೇಳಿದಂತೆ ಇಂಟರ್ ನ್ಯಾಷನಲ್ ಲೋನ್ ಎಕ್ಸ್ ಪರ್ಟ್ಸ್ ನಮ್ಮ ಬ್ಲೂಪ್ರಿಂಟ್ಸ್‌ನ್ನು ತಯಾರು ಮಾಡಿ ಅದನ್ನು ಒಪ್ಪಿಕೊಳ್ಳುವುದಕ್ಕೆ ೩ ವರ್ಷಗಳನ್ನು ತೆಗೆದುಕೊಂಡರು. ಬೀ ಕನ್‌ಸಲ್ಟೆಟಿವ್ ಫೀಸ್ ೮೬ ಲಕ್ಷ ರೂಪಾಯಿಗಳಾದರೆ ಅದನ್ನು ಕೊಡುವು ದಾದರು ಹೇಗೆ ? ನಂತರ ಶ್ರೀಮಾನ್ ಮಂಗ್ದುಂರವರು ಅಧ್ಯಕ್ಷರಾಗುವುದಕ್ಕೆ ಮುಂಚೆಯೇ ಅಂದರೆ ಅಷ್ಟು ಹೊತ್ತಿಗೆ ಕೋಟಿ ೨೬ ಲಕ್ಷ ರೂಪಾಯಿಗಳನ್ನು ರಾಜ್ಯದ ಬೊಕ್ಕಸದಿಂದ ಕೊಟ್ಟುಬಿಟ್ಟಿದ್ದರು. ಆದರೂ ಕಾವೇರಿ ನೀರು ನಗರಕ್ಕೆ ಬರುವ ಸೂಚನೆಗಳು ಇರಲಿಲ್ಲ. ಮಾನ್ಯ ಮಿತ್ರರು ಇವರ ಬಗ್ಗೆ ವಿನಾಕಾರಣ ಟೀಕೆ ಟಿಪ್ಪಣಿಗಳನ್ನು ಮಾಡುತ್ತಿದ್ದಾರೆ. ಅದು ಏನೇ ಇರಲಿ, ನನಗನಿಸುತ್ತದೆ, ನಮ್ಮ ಕರ್ನಾಟಕದವರೇ ಆದ ಮಂಗ್ದುಂರವರ ಕಾಲದಲ್ಲಿ ನಗರಕ್ಕೆ ನೀರು ಬಂತು. ಈಗ ಯಾರ ಕಾಲದಲ್ಲಾದರೂ ಒಂದು ಮುಖ್ಯ